## ಕೊಕೇನ್‌ನಿಂದ ಸಾವು!

ಕೊಕೇನ್ ರೀತಿಯ ಮಾದಕ ದ್ರವ್ಯ ಕೇವಲ ವ್ಯಸನವನ್ನು ಮಾತ್ರ ಹುಟ್ಟಿಸುವುದಿಲ್ಲ. ಅಪ್ಪಿತಪ್ಪಿ ಅತಿಯಾಗಿ ತೆಗೆದುಕೊಂಡರೆ ಪಾರ್ಶ್ವವಾಯು ಪೀಡಿತರಾಗಿ ಶಾಶ್ವತ ಅಂಗವಿಕಲತೆಗೆ ತುತ್ತಾಗಬಹುದು. ಇಲ್ಲವೆ, ಕೆಲವೇ ಗಂಟೆಗಳಲ್ಲಿ ಮಾದಕ ವ್ಯಸನಿ ಸಾವನ್ನಪ್ಪಬಹುದು ಎಂದು ನ್ಯೂಯಾರ್ಕ್‌ನ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಯುವಕನೊಬ್ಬ ಕೊಕೇನ್‌ಅನ್ನು ತೆಗೆದುಕೊಳ್ಳುವ ಅಭ್ಯಾಸ ಇಟ್ಟುಕೊಂಡಿದ್ದು, ಅವನು ಯಾವತ್ತಾದರೂ ಒಮ್ಮೆ ನಿರ್ದಿಷ್ಟ ಮಿತಿ ದಾಟಿ ಸ್ವಲ್ಪ ಹೆಚ್ಚಿಗೆ ತೆಗೆದುಕೊಂಡ ಸಂದರ್ಭದಲ್ಲಿ ಕೂಡಲೇ ರಕ್ತನಾಳಗಳಲ್ಲಿ ರಕ್ತ ಸಂಚಾರ ಸ್ಥಗಿತಗೊಳ್ಳುವುದರಿಂದ ಸಾವೂ ಸಂಭವಿಸಬಹುದು ಎಂದು ಸಂಶೋಧಕರು ಎಚ್ಚರಿಕೆ ನೀಡಿದ್ದಾರೆ.

## ವಾಯುಮಾಲಿನ್ಯ ದಮ್‌ನಷ್ಟೇ ಅಪಾಯ!

ವಾಯು ಮಾಲಿನ್ಯ ಧೂಮಪಾನದಷ್ಟೇ ಅಪಾಯವನ್ನು ಗರ್ಭಿಣಿಯರಿಗೆ ಉಂಟು ಮಾಡುತ್ತದೆ ಎನ್ನುವ ಸಂಗತಿ ಸಂಶೋಧಕರು ನಡೆಸಿದ ಇತ್ತೀಚಿನ ಅಧ್ಯಯನದಿಂದ ತಿಳಿದುಬಂದಿದೆ.

ಕಲುಷಿತ ಗಾಳಿಯನ್ನು ಉಸಿರಾಡುವುದು ಗರ್ಭಿಣಿಯರಿಗೆ ಪರೋಕ್ಷ ಧೂಮಪಾನದಷ್ಟೆ ತೊಂದರೆಯನ್ನು ಉಂಟುಮಾಡುತ್ತದೆ. ಇದರಿಂದ ಗರ್ಭವತಿಗೆ ಅಧಿಕ ರಕ್ತದೊತ್ತಡ ಉಂಟಾಗುವ ಸಾಧ್ಯತೆಯಿದೆ. ಮಾನಸಿಕ ಒತ್ತಡವೂ ಜಾಸ್ತಿಯಾಗುತ್ತದೆ ಎಂಬ ಸಂಗತಿಯನ್ನು ಸಂಶೋಧಕರು ಬಹಿರಂಗಪಡಿಸಿದ್ದಾರೆ.

## ಕಾಡುವ ಬಾಲ್ಯದ ಬೊಜ್ಜು!

ಬಾಲ್ಯದಲ್ಲಿ ಉಂಟಾಗುವ ಬೊಜ್ಜು ದೀರ್ಘ ಕಾಲದವರೆಗೂ ಅಡ್ಡಪರಿಣಾಮ ಉಂಟುಮಾಡುತ್ತದೆ ಎಂಬ ಎಚ್ಚರಿಕೆಯನ್ನು ಸಂಶೋಧಕರು ನೀಡಿದ್ದಾರೆ.

ಬಾಲ್ಯದಲ್ಲಿದ್ದ ಬೊಜ್ಜನ್ನು ಕ್ರಮೇಣ ಕರಗಿಸಿದರೂ ಅದರ ಪರಿಣಾಮ ತಪ್ಪಿದ್ದಲ್ಲ. ಅದರಿಂದ ದೇಹ ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗೆ ತನ್ನನ್ನು ಒಡ್ಡಿಕೊಂಡಿರುತ್ತದೆ. ಒಂದು ಪಕ್ಷ ಬೊಜ್ಜು ಕರಗಿಸಿದರೂ ಆ ಸಮಸ್ಯೆ ಕಾಡದೆ ಇರದು ಎಂದು ವಾಷಿಂಗ್ಟನ್ ತಜ್ಞರು ಹೇಳಿದ್ದಾರೆ.

ಎಳೆಯ ವಯಸ್ಸಿನಲ್ಲಿ ಕೊಬ್ಬು ಬೆಳೆದರೆ ಅದರಿಂದ ಉಂಟಾಗಬಹುದಾದ ಅಡ್ಡಪರಿಣಾಮಗಳಿಗೆ ದೇಹ ಒಳಗಾಗುತ್ತದೆ. ಕಾಲಾನಂತರ ರೋಗ ಲಕ್ಷಣವೂ ವೃದ್ಧಿಯಾಗಿ ತನ್ನ ಲಕ್ಷಣವನ್ನು ತೋರಿಸುತ್ತದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ವಿಟಮಿನ್ 'ಸಿ'ಯ ಲಾಭ ಅಧಿಕ!

ವಿಟಮಿನ್ 'ಸಿ' ಆರೋಗ್ಯದ ದೃಷ್ಟಿಯಿಂದ ತುಂಬಾ ಪ್ರಯೋಜನಕಾರಿ. ಇದು ಮನುಷ್ಯನಲ್ಲಿ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ ಎಂದು ಈ ಹಿಂದಿನ ಅಧ್ಯಯನಗಳು ಹೇಳಿದ್ದವು. ಇತ್ತೀಚಿನ ಸಂಶೋಧನೆಯೊಂದು ಕ್ಯಾನ್ಸರ್‌ಕಾರಕ ಜೀವಕೋಶಗಳನ್ನು ನಿಯಂತ್ರಿಸುವ ಶಕ್ತಿ ಅದಕ್ಕಿದೆ ಎಂದು ಹೇಳಿದೆ.

ಅಮೆರಿಕದ ಸಂಶೋಧಕರು ಹೇಳುವ ಪ್ರಕಾರ, ವಿಟಮಿನ್ ಸಿ ಬಳಕೆಯಿಂದ ಕ್ಯಾನ್ಸರ್‌ಗೆ ಪರಿಣಾಮಕಾರಿ ಚಿಕಿತ್ಸೆ ನೀಡಬಹುದು. ವಿಟಮಿನ್ ಸಿ ಇಂಜೆಕ್ಷನ್ ಕಡಿಮೆ ವೆಚ್ಚದಾಯಕ. ಇದನ್ನು ನೀಡುವುದರಿಂದ ರೋಗಿಗೆ ಅಡ್ಡಪರಿಣಾಮ ಉಂಟಾಗುವುದಿಲ್ಲ. ಪರಿಣಾಮಕಾರಿ ಚಿಕಿತ್ಸೆಗೆ ಇದು ತುಂಬಾ ಅನುಕೂಲಕರ ಎಂದು ಸಂಶೋಧಕರು ಹೇಳಿದ್ದಾರೆ.

ಈ ಸಂಬಂಧ 27 ಕ್ಯಾನ್ಸರ್ ಪೀಡಿತರನ್ನು ಸಂಶೋಧಕರು ತಮ್ಮ ಅಧ್ಯಯನಕ್ಕೆ ಬಳಸಿದ್ದರು. ಅವರಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ವಿಟಮಿನ್ ಸಿ ಇಂಜೆಕ್ಷನ್ ಬಳಸಿದ್ದರು. ಅದರಿಂದ ಕ್ಯಾನ್ಸರ್ ಜೀವಕೋಶಗಳನ್ನು ಕೊಲ್ಲಬಹುದು ಎನ್ನುವ ಸಂಗತಿ ತಿಳಿದುಬಂತು ಎಂದು ತಜ್ಞರು ಹೇಳಿದ್ದಾರೆ.

–ಟಿಪ್ಸ್




